ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಸೋಮವಾರ, ೧೦, ಆಗಸ್ಟ್, ೨೦೨೬ (ಶ್ರಾವಣ, ೧೯, ಶಕವರ್ಷ, ೧೯೪೮) BENGALURU, MONDAY, 10, AUGUST, 2026 (SHRAVANA , 19, SHAKAVARSHA, 1948)	ನಂ. ೬೦೫ No. 605

ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 80 ಡಿಪಿಐ 2026

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:10.08.2026.

ಅಧಿಸೂಚನೆ

ಕರ್ನಾಟಕ ನಾಗರೀಕ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ ಕಲಂ-3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡವನ್ನು 8ನೇ ಪ್ರಕರಣದೊಡನೆ ಓದಿಕೊಂಡಂತೆ ಮತ್ತು ತನ್ಮೂಲಕ ಅಗತ್ಯಪಡಿಸಲಾದಂತೆ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ಕೆಲವು ಬೋಧನಾ ಹುದ್ದೆಗಳಿಗೆ ನೇಮಕಾತಿ) (ವಿಶೇಷ) ನಿಯಮಗಳು, 2026ರ ಕರಡನ್ನು ದಿನಾಂಕ:14.07.2026 ರಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ – IVA (ಸಂಖ್ಯೆ: 522) ರಲ್ಲಿ ಪ್ರಕಟಿಸಿ, ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅದರಿಂದ ಭಾದಿತರಾಗಲು ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿರುವುದರಿಂದ;

ಸದರಿ ವಿಶೇಷ ಸಂಚಿಕೆಯ ರಾಜ್ಯ ಪತ್ರವನ್ನು ದಿನಾಂಕ: 14.07.2026 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ;

ಮತ್ತು ಸದರಿ ಕರಡು ತಿದ್ದುಪಡಿ ನಿಯಮಗಳ ಬಗ್ಗೆ ಅದರಿಂದ ಭಾದಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಸ್ವೀಕೃತವಾಗಿರುವ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಲಾಗಿದೆ.

ಈಗ ಕರ್ನಾಟಕ ನಾಗರೀಕ ಸೇವೆಗಳು ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣದೊಂದಿಗೆ ಓದಿಕೊಂಡು 3ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸಿದೆ, ಎಂದರೆ:-

ನಿಯಮಗಳು

1. ಶೀರ್ಷಿಕೆ ಪ್ರಾರಂಭ ಮತ್ತು ಅನ್ವಯ.- (1) ಈ ನಿಯಮಗಳನ್ನು ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ಕೆಲವು ಬೋಧನಾ ಹುದ್ದೆಗಳಿಗೆ ನೇಮಕಾತಿ) (ವಿಶೇಷ) ನಿಯಮಗಳು, 2026 ಎಂದು ಕರೆಯತಕ್ಕದ್ದು.

Scanned with CamScanner

Scanned with OKEN Scanner

(2) ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಯಾಗತಕ್ಕದ್ದು.

(3) ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977 ಅಥವಾ ಕರ್ನಾಟಕ ಶಿಕ್ಷಣ ಇಲಾಖೆಯ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು 1967 ಅಥವಾ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ಅಥವಾ ಕರ್ನಾಟಕ ರಾಜ್ಯ ನಾಗರಿಕ ಸೇವಾ ಕಾಯಿದೆ 1978 (1990 ರ ಕರ್ನಾಟಕ ಕಾಯಿದೆ 14) ಅಡಿಯಲ್ಲಿ ಮಾಡಲಾದ ಅಥವಾ ಮಾಡಲಾಗಿದೆ ಎಂದು ಭಾವಿಸಲಾದ ಯಾವುದೇ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಈ ನಿಯಮಗಳ ಉಪಬಂಧಗಳು ಅವುಗಳಡಿ ಮಾಡುವ ನೇಮಕಾತಿಗೆ ಮಾತ್ರ ಅನ್ವಯಿಸತಕ್ಕದ್ದು.

(4) ಈ ನಿಯಮಗಳ ಉಪಬಂಧಗಳು ಒಂದಕ್ಕಿಂತ ಹೆಚ್ಚು ನೇಮಕಾತಿಗಳಿಗೆ ಅನ್ವಯಿಸುವುದಿಲ್ಲ.

2. ವ್ಯಾಖ್ಯೆಗಳು,- (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.

(ಎ) "ನೇಮಕಾತಿ ಪ್ರಾಧಿಕಾರ" ಎಂದರೆ ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5 ನೇ ತರಗತಿ), ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8 ನೇ ತರಗತಿ), ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್ - II) (1 ರಿಂದ 8 ನೇ ತರಗತಿ), ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8 ನೇ ತರಗತಿ), ಪ್ರೌಢ ಶಾಲಾ ಸಹ ಶಿಕ್ಷಕರು ಮತ್ತು ಪ್ರೌಢ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–Iರ ಹುದ್ದೆಗಳಿಗೆ ಸಂಬಂಧಿಸಿದಂತೆ ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆರವರು.

(ಬಿ) "ಪರೀಕ್ಷಾ ಪ್ರಾಧಿಕಾರ" ಎಂದರೆ, ನಿಯಮ 3 ರಡಿ ನಿರ್ದಿಷ್ಟಪಡಿಸಿದ ಈ ನಿಯಮಗಳ ಅಡಿಯಲ್ಲಿ ನೇಮಕಾತಿ ಉದ್ದೇಶಕ್ಕಾಗಿ ರಚಿಸಲಾದ ಕೇಂದ್ರೀಕೃತ ದಾಖಲಾತಿ ಘಟಕ.

(ಸಿ) "ಅರ್ಹತಾ ಪರೀಕ್ಷೆ" ಎಂದರೆ ಅನುಸೂಚಿ-1ರ ಕಾಲಂ (3) ರಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ಹುದ್ದೆಗಳಿಗೆ ನೇಮಕಾತಿಗಾಗಿ ಕಾಲಂ (2) ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಟ ಅರ್ಹತೆ;

(ಡಿ) "ಆಯ್ಕೆ ಪ್ರಾಧಿಕಾರ" ಎಂದರೆ.-

(i) ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5 ನೇ ತರಗತಿ), ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8 ನೇ ತರಗತಿ), ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್ - II) (1 ರಿಂದ 8 ನೇ ತರಗತಿ) ಮತ್ತು ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8 ನೇ ತರಗತಿ) ವೃಂದಗಳಲ್ಲಿನ ಹುದ್ದೆಗಳಿಗೆ ಸಂಬಂಧಿಸಿದಂತೆ ಸಂಬಂಧಿತ ಶೈಕ್ಷಣಿಕ ಜಿಲ್ಲೆಯ ಪ್ರಭಾರ ಹೊಂದಿರುವ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ); ಮತ್ತು

(ii) ಪ್ರೌಢ ಶಾಲಾ ಸಹ ಶಿಕ್ಷಕರು ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–Iರ ವೃಂದಗಳಲ್ಲಿನ ಹುದ್ದೆಗಳಿಗೆ ಸಂಬಂಧಿಸಿದಂತೆ ಆಯಾ ಶೈಕ್ಷಣಿಕ ವಿಭಾಗದ ಪ್ರಭಾರ ಹೊಂದಿರುವ ಶಾಲಾ ಶಿಕ್ಷಣ ಇಲಾಖೆಯ ವಿಭಾಗೀಯ ಜಂಟಿ ನಿರ್ದೇಶಕರು.

(ಇ) "ಅನುಸೂಚಿ" ಎಂದರೆ ಈ ನಿಯಮಗಳಿಗೆ ಲಗತ್ತಿಸಲಾದ ಅನುಸೂಚಿ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಅದರಲ್ಲಿ ವಾಖ್ಯಾನಿಸದ ಪದಗಳು ಮತ್ತು ಅಭಿವ್ಯಕ್ತಿಗಳು ಸಂದರ್ಭಾನುಸಾರ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967 ರಲ್ಲಿ ಅವುಗಳಿಗೆ ನಿಗದಿಪಡಿಸಿದ ಅರ್ಥವನ್ನು ಹೊಂದಿರುತ್ತವೆ.

Scanned with CamScanner

Scanned with OKEN Scanner

3. ಪರೀಕ್ಷಾ ಪ್ರಾಧಿಕಾರ.- ಈ ನಿಯಮಗಳ ಅಡಿಯಲ್ಲಿ ನೇಮಕಾತಿ ಉದ್ದೇಶಕ್ಕಾಗಿ ಪರೀಕ್ಷಾ ಪ್ರಾಧಿಕಾರವು ಈ ಕೆಳಗಿನಂತೆ ಸಂರಚನೆ ಹೊಂದಿರುತ್ತದೆ:

(i)	ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ	ಅಧ್ಯಕ್ಷರು
(ii)	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಇ-ಆಡಳಿತ ಅಥವಾ ಅವರ ನಾಮ ನಿರ್ದೇಶಿತರು	ಸದಸ್ಯರು
(iii)	ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ	ಸದಸ್ಯರು
(iv)	ನಿರ್ದೇಶಕರು (ಪ್ರೌಢ ಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ	ಸದಸ್ಯರು
(v)	ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.	ಸದಸ್ಯರು
(vi)	ಜಂಟಿ ನಿರ್ದೇಶಕರು, ಕೇಂದ್ರೀಕೃತ ದಾಖಲಾತಿ ಘಟಕ , ಬೆಂಗಳೂರು	ಸದಸ್ಯ ಕಾರ್ಯದರ್ಶಿ
(vii)	ಶಾಲಾ ಶಿಕ್ಷಣ ಇಲಾಖೆಯ ಶೈಕ್ಷಣಿಕ ವಿಭಾಗದ ಆಯಾ ವಿಭಾಗೀಯ ಜಂಟಿ ನಿರ್ದೇಶಕರು	ಸದಸ್ಯರು
(viii)	ಜಂಟಿ ನಿರ್ದೇಶಕರು, ದೈಹಿಕ ಶಿಕ್ಷಣ , ಆಯುಕ್ತರ ಕಛೇರಿ, ಬೆಂಗಳೂರು.	ಸದಸ್ಯರು
(ix)	ಆಯುಕ್ತರು ನಾಮ ನಿರ್ದೇಶನ ಮಾಡುವ ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿ.ಟಿ.ಇ.)	ಸದಸ್ಯರು
(x)	ಆಯುಕ್ತರು ನಾಮ ನಿರ್ದೇಶನ ಮಾಡುವ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ)	ಸದಸ್ಯರು
(xi)	ರಾಜ್ಯ ಮಾಹಿತಿ ಅಧಿಕಾರಿ, NIC ಬೆಂಗಳೂರು	ಸದಸ್ಯರು
(xii)	ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರ (KSDC)	ಸದಸ್ಯರು
(xiii)	ಉಪನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು	ಸದಸ್ಯರು
(xiv)	ಉಪನಿರ್ದೇಶಕರು (ಪ್ರೌಢ ಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು	ಸದಸ್ಯರು
(xv)	ಆಯುಕ್ತರು ನಾಮನಿರ್ದೇಶನ ಮಾಡುವ ಇಬ್ಬರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(DIET) ಪ್ರಾಂಶುಪಾಲರು	ಸದಸ್ಯರು
(xvi)	ಆಯುಕ್ತರು ನಾಮನಿರ್ದೇಶನ ಮಾಡುವ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ	ಸದಸ್ಯರು

4. ಅರ್ಜಿಗಳನ್ನು ಆಹ್ವಾನಿಸುವುದು.- ನೇಮಕಾತಿ ಪ್ರಾಧಿಕಾರವು ಅರ್ಹತೆಯ ಷರತ್ತುಗಳು, ಅನ್ವಯವಾಗುವ ಆಯ್ಕೆ ವಿಧಾನ, ಪರೀಕ್ಷೆಗೆ ಪಠ್ಯಕ್ರಮ, ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ತಾತ್ಕಾಲಿಕ ಸಂಖ್ಯೆಯನ್ನು ಮತ್ತು ರಾಜ್ಯ ಸರ್ಕಾರವು ನಿಗದಿಪಡಿಸಿದ ಮೀಸಲಾತಿ ನೀತಿಯ ಪ್ರಕಾರ ಅವುಗಳ ವರ್ಗೀಕರಣವನ್ನು ನಿರ್ದಿಷ್ಟಪಡಿಸುವ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕದ್ದು. ಅಧಿಸೂಚನೆಯ ಸಂಕ್ಷಿಪ್ತ ವಿವರಗಳುಳ್ಳ ಅಂತಹ ಜಾಹೀರಾತನ್ನು ಕನ್ನಡ ಮತ್ತು ಆಂಗ್ಲ ಭಾಷೆಯ ಅತ್ಯಧಿಕ ಪ್ರಸಾರವುಳ್ಳ ಒಂದಕ್ಕಿಂತ ಹೆಚ್ಚು ಪತ್ರಿಕೆಗಳಲ್ಲಿ, ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಮತ್ತು ಸೂಕ್ತವೆಂದು ಭಾವಿಸುವ ಇತರೆ ಪ್ರಚಾರ ಮಾಧ್ಯಮಗಳಲ್ಲಿ ಪ್ರಕಟಿಸಬೇಕು.

5. ಸ್ಪರ್ಧಾತ್ಮಕ ಪರೀಕ್ಷೆ ನಡೆಸುವುದು.- (1) ಪರೀಕ್ಷಾ ಪ್ರಾಧಿಕಾರವು ಅಭ್ಯರ್ಥಿಗಳ ಆಯ್ಕೆಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಈ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ನಡೆಸತಕ್ಕದ್ದು.

(2) ಪರೀಕ್ಷಾ ವಿಧಾನ, - ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಏಕಕಾಲದಲ್ಲಿ ಪ್ರತಿಯೊಂದು ವೃಂದಕ್ಕೂ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸತಕ್ಕದ್ದು. ಪರೀಕ್ಷಾ ಪದ್ಧತಿ ಸೂಚಿಯನ್ನು ಅನುಸೂಚಿ-2 ರಲ್ಲಿ ನಿರ್ದಿಷ್ಟಪಡಿಸಲಾಗಿದೆ.

(3) ಪರೀಕ್ಷಾ ಮಾಧ್ಯಮ: ಕನ್ನಡ ಮತ್ತು ಆಂಗ್ಲ

Scanned with CamScanner

Scanned with OKEN Scanner

(4) ಅಭ್ಯರ್ಥಿಯು ಯಾವುದೇ ಮೀಸಲಾತಿ ವರ್ಗಕ್ಕೆ ಸೇರಿದವರಾಗಿದ್ದರೂ, ಆಯ್ಕೆಗೆ ಪರಿಗಣಿಸಲ್ಪಡಲು ಅರ್ಹರಾಗಲು ಸ್ಪರ್ಧಾತ್ಮಕ ಪರೀಕ್ಷೆಯ ಪ್ರತಿಯೊಂದು ಪತ್ರಿಕೆಯಲ್ಲಿ ಕನಿಷ್ಠ ಶೇಕಡಾ ಮೂವತ್ತೈದು ಅಂಕಗಳನ್ನು ಪಡೆದಿರಬೇಕು.

6. ಆಯ್ಕೆ ವಿಧಾನ.- (1) ಆಯ್ಕೆ ಪ್ರಾಧಿಕಾರವು ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5 ನೇ ತರಗತಿ), ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8 ನೇ ತರಗತಿ), ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್-II) (1 ರಿಂದ 8 ನೇ ತರಗತಿ) ಮತ್ತು ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8 ನೇ ತರಗತಿ) ಹುದ್ದೆಗಳಿಗೆ ಆಯ್ಕೆ ಮಾಡಲು ಆಯಾ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಪ್ರತ್ಯೇಕ ಅರ್ಹತಾ ಪಟ್ಟಿಗಳನ್ನು ಸಿದ್ಧಪಡಿಸಬೇಕು. ಆಯ್ಕೆ ಪ್ರಾಧಿಕಾರವು ಅಧಿಸೂಚನೆ ಮಾಡಲಾದ ಆಯಾ ವಿಷಯವಾರು, ಮಾಧ್ಯಮವಾರು ಮತ್ತು ವರ್ಗವಾರು ಹುದ್ದೆಗಳಿಗೆ ನಿಗದಿಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆ, ಶಿಕ್ಷಕರ ಅರ್ಹತಾ ಪರೀಕ್ಷೆ, ಮತ್ತು ಶಿಕ್ಷಕರ ಶಿಕ್ಷಣ ಕೋರ್ಸ್‌ನಲ್ಲಿ ಪಡೆದ ಅಂಕಗಳನ್ನು ಅನುಪಾತದ ನಿಗದಿತ ಮಾದರಿಯ weightage ಅನುಸರಿಸಿ (derived percentage) ಲೆಕ್ಕಹಾಕಿದ ಶೇಕಡವಾರು ಆಧಾರದ ಮೇಲೆ, ಆಯ್ಕೆಗೆ ಅರ್ಹತಾ ಪಟ್ಟಿಯನ್ನು ತಯಾರಿಸತಕ್ಕದ್ದು.

(2) ಆಯ್ಕೆ ಪ್ರಾಧಿಕಾರವು ಪ್ರೌಢ ಶಾಲಾ ಸಹ ಶಿಕ್ಷಕರು ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–Iರ ವೃಂದಗಳಲ್ಲಿನ ಹುದ್ದೆಗಳಿಗೆ ಆಯ್ಕೆ ಮಾಡಲು ಆಯಾ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಪ್ರತ್ಯೇಕ ಅರ್ಹತಾ ಪಟ್ಟಿಗಳನ್ನು ಸಿದ್ಧಪಡಿಸಬೇಕು. ಆಯ್ಕೆ ಪ್ರಾಧಿಕಾರವು ಅಧಿಸೂಚನೆ ಮಾಡಲಾದ ಆಯಾ ವಿಷಯವಾರು, ಮಾಧ್ಯಮವಾರು ಮತ್ತು ವರ್ಗವಾರು ಹುದ್ದೆಗಳಿಗೆ ನಿಗದಿಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆ, ಶಿಕ್ಷಕರ ಅರ್ಹತಾ ಪರೀಕ್ಷೆ, ಮತ್ತು ಶಿಕ್ಷಕರ ಶಿಕ್ಷಣ ಕೋರ್ಸ್‌ನಲ್ಲಿ ಪಡೆದ ಅಂಕಗಳನ್ನು ಅನುಪಾತದ ನಿಗದಿತ ಮಾದರಿಯ weightage ಅನುಸರಿಸಿ (derived percentage) ಲೆಕ್ಕಹಾಕಿದ ಶೇಕಡವಾರು ಆಧಾರದ ಮೇಲೆ, ಆಯ್ಕೆಗೆ ಅರ್ಹತಾ ಪಟ್ಟಿಯನ್ನು ತಯಾರಿಸತಕ್ಕದ್ದು.

(3) ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ)

(ಎ) ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೊಮಾ (D.El.Ed) ಅಥವಾ ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾ ಹೊಂದಿರುವ ಅಭ್ಯರ್ಥಿ ಪ್ರಕರಣದಲ್ಲಿ ಆ ಅಭ್ಯರ್ಥಿಯ (derived percentage) ಶೇಕಡಾವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ನ್ನು ಅನ್ವಯಿಸುವ ಮೂಲಕ ಲೆಕ್ಕಹಾಕಲಾಗುತ್ತದೆ:

ಕ್ರ ಸಂ.	ವಿವರ	Weightage
1	ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET)	70%
2	ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳು (TET – ಪತ್ರಿಕೆ I)	20%
3	ಪಿಯುಸಿ / ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳು	8%
4	ಶಿಕ್ಷಕರ ಶಿಕ್ಷಣ ಕೋರ್ಸ್ ನಲ್ಲಿ ಪಡೆದ ಅಂಕಗಳು	2%

(ಬಿ) ನಾಲ್ಕು ವರ್ಷಗಳ ಶಿಕ್ಷಕರ ಶಿಕ್ಷಣ ಪದವಿ ಹೊಂದಿರುವ ಅಭ್ಯರ್ಥಿಯ ಪ್ರಕರಣದಲ್ಲಿ ಆ ಅಭ್ಯರ್ಥಿಯ (derived percentage) ಶೇಕಡಾವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ನ್ನು ಅನ್ವಯಿಸುವ ಮೂಲಕ ಲೆಕ್ಕಹಾಕಲಾಗುತ್ತದೆ:

ಕ್ರ ಸಂ.	ವಿವರ	Weightage
1	ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET)	70%
2	ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳು (TET – ಪತ್ರಿಕೆ I)	20%
3	ನಾಲ್ಕು ವರ್ಷಗಳ B.El.Ed., B.A.Ed., B.Sc.Ed., ಅಥವಾ ತತ್ಸಮಾನ ಶಿಕ್ಷಕರ ಶಿಕ್ಷಣ ಪದವಿಯಲ್ಲಿ ಪಡೆದ ಅಂಕಗಳು	10%

Scanned with CamScanner

Scanned with OKEN Scanner

(4) *ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8ನೇ ತರಗತಿ)*

(ಎ) ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೊಮಾ (D.El.Ed), ಬಿ.ಇಡಿ., ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾ ಅಥವಾ ಬಿ.ಇಡಿ(ವಿಶೇಷ ಶಿಕ್ಷಣ) ಹೊಂದಿರುವ ಅಭ್ಯರ್ಥಿ ಪ್ರಕರಣದಲ್ಲಿ ಆ ಅಭ್ಯರ್ಥಿಯ (derived percentage) ಶೇಕಡಾವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ನ್ನು ಅನ್ವಯಿಸುವ ಮೂಲಕ ಲೆಕ್ಕಹಾಕಲಾಗುತ್ತದೆ:

ಕ್ರ ಸಂ.	ವಿವರ	Weightage
1	ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET)	70%
2	ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳು (TET – ಪತ್ರಿಕೆ II)	20%
3	ಪದವಿ ಪರೀಕ್ಷೆಯಲ್ಲಿ ಪಡೆದ ಅಂಕಗಳು	8%
4	ಶಿಕ್ಷಕರ ಶಿಕ್ಷಣ ಕೋರ್ಸ್ ನಲ್ಲಿ ಪಡೆದ ಅಂಕಗಳು	2%

(ಬಿ) ನಾಲ್ಕು ವರ್ಷಗಳ ಶಿಕ್ಷಕರ ಶಿಕ್ಷಣ ಪದವಿ ಹೊಂದಿರುವ ಅಭ್ಯರ್ಥಿಯ ಪ್ರಕರಣದಲ್ಲಿ ಆ ಅಭ್ಯರ್ಥಿಯ (derived percentage) ಶೇಕಡಾವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ನ್ನು ಅನ್ವಯಿಸುವ ಮೂಲಕ ಲೆಕ್ಕಹಾಕಲಾಗುತ್ತದೆ:

ಕ್ರ ಸಂ.	ವಿವರ	Weightage
1	ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET)	70%
2	ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳು (TET – ಪತ್ರಿಕೆ II)	20%
3	ನಾಲ್ಕು ವರ್ಷಗಳ B.El.Ed., B.A.Ed., B.Sc.Ed., ಅಥವಾ B.Ed.-M.Ed. ಸಂಯೋಜಿತ ಪದವಿಯಲ್ಲಿ ಪಡೆದ ಅಂಕಗಳು	10%

(5) *ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8ನೇ ತರಗತಿ)*

ಕ್ರ ಸಂ.	ವಿವರ	Weightage
1	ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET)	85%
2	ನಿಗದಿಪಡಿಸಿದ ಪದವಿಯಲ್ಲಿ ಪಡೆದ ಅಂಕಗಳು	15%

(6) *ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-II (1 ರಿಂದ 8ನೇ ತರಗತಿ)*

ದೈಹಿಕ ಶಿಕ್ಷಣದಲ್ಲಿ ಸರ್ಟಿಪಿಕೇಟ್ / ಡಿಪ್ಲೋಮಾದಲ್ಲಿ ಅಥವಾ ದೈಹಿಕ ಶಿಕ್ಷಣ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿ ಪ್ರಕರಣದಲ್ಲಿ ಆ ಅಭ್ಯರ್ಥಿಯ (derived percentage) ಶೇಕಡಾವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ನ್ನು ಅನ್ವಯಿಸುವ ಮೂಲಕ ಲೆಕ್ಕಹಾಕಲಾಗುತ್ತದೆ:

ಕ್ರ ಸಂ.	ವಿವರ	Weightage
1	ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET)	85%
2	ಪಿಯುಸಿ / ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳು	13%
3	ದೈಹಿಕ ಶಿಕ್ಷಣ ಸರ್ಟಿಪಿಕೇಟ್ / ಡಿಪ್ಲೋಮಾದಲ್ಲಿ ಪಡೆದ ಅಂಕಗಳು	2%

Scanned with CamScanner

Scanned with OKEN Scanner

(7) *ಪ್ರೌಢ ಶಾಲಾ ಸಹ ಶಿಕ್ಷಕರು*

ಬಿ.ಇಡಿ. ಅಥವಾ ಬಿ.ಇಡಿ. (ವಿಶೇಷ ಶಿಕ್ಷಣ) ಅರ್ಹತೆ ಹೊಂದಿರುವ ಅಭ್ಯರ್ಥಿ ಪ್ರಕರಣದಲ್ಲಿ ಆ ಅಭ್ಯರ್ಥಿಯ (derived percentage) ಶೇಕಡಾವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ನ್ನು ಅನ್ವಯಿಸುವ ಮೂಲಕ ಲೆಕ್ಕಹಾಕಲಾಗುತ್ತದೆ:

ಕ್ರ ಸಂ.	ವಿವರ	Weightage
1	ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET)	85%
2	ಪದವಿ ಪರೀಕ್ಷೆಯಲ್ಲಿ ಪಡೆದ ಅಂಕಗಳು	13%
3	ಶಿಕ್ಷಕರ ಶಿಕ್ಷಣ ಕೋರ್ಸ್ ನಲ್ಲಿ ಪಡೆದ ಅಂಕಗಳು	2%

(8) *ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್-I)*

ದೈಹಿಕ ಶಿಕ್ಷಣದಲ್ಲಿ ಪದವಿ (ಬಿ.ಪಿ.ಎಡ್.), ಬಿ.ಪಿ.ಎಡ್. (ವಿಶೇಷ ಶಿಕ್ಷಣ) ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿ ಪ್ರಕರಣದಲ್ಲಿ ಆ ಅಭ್ಯರ್ಥಿಯ (derived percentage) ಶೇಕಡಾವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ನ್ನು ಅನ್ವಯಿಸುವ ಮೂಲಕ ಲೆಕ್ಕಹಾಕಲಾಗುತ್ತದೆ:

ಕ್ರ ಸಂ.	ವಿವರ	Weightage
1	ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET)	85%
2	ಪದವಿ ಪರೀಕ್ಷೆಯಲ್ಲಿ ಪಡೆದ ಅಂಕಗಳು	13%
3	ದೈಹಿಕ ಶಿಕ್ಷಣ ಕೋರ್ಸ್ ನಲ್ಲಿ ಪಡೆದ ಅಂಕಗಳು	2%

7. ಮೀಸಲಾತಿ, - ನೇರ ನೇಮಕಾತಿಗಳಿಗೆ ಚಾಲ್ತಿಯಲ್ಲಿರುವ ನಿಯಮಗಳಂತೆ, ಲಂಬ ಹಾಗೂ ಸಮತಳ ಎರಡೂ ಮೀಸಲಾತಿಗಳು, ಪ್ರಸ್ತುತ ನಿಯಮಗಳಡಿಯಲ್ಲಿ ಮಾಡುವ ನೇಮಕಾತಿಗಳಿಗೆ ಅನ್ವಯವಾಗತಕ್ಕದ್ದು.

8. ವಯೋಮಿತಿ, - (1) ಈ ನಿಯಮಗಳ ಅಡಿಯಲ್ಲಿ ನೇಮಕಾತಿಗಾಗಿ, ಅಭ್ಯರ್ಥಿಯು 21 ವರ್ಷ ವಯೋಮಾನದವರಾಗಿರಬೇಕು ಮತ್ತು ಕೆಳಗಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ವಯಸ್ಸಿನ ಮಿತಿಯನ್ನು ಮೀರಿರಬಾರದು:

ಅಭ್ಯರ್ಥಿಯ ವರ್ಗ	ಗರಿಷ್ಟ ವಯೋಮಿತಿ
ಪರಿಶಿಷ್ಟ ಜಾತಿಗಳು (SC), ಪರಿಶಿಷ್ಟ ಪಂಗಡಗಳು (ST), ಪ್ರವರ್ಗ-I ಮತ್ತು ಅಂಗವೈಕಲ್ಯವುಳ್ಳ ವ್ಯಕ್ತಿಗಳು	45 ವರ್ಷಗಳು
ವರ್ಗ-IIA, ವರ್ಗ-IIB, ವರ್ಗ-IIIA ಮತ್ತು ವರ್ಗ-IIIB	43 ವರ್ಷಗಳು
ಸಾಮಾನ್ಯ ಅರ್ಹತೆ (ಇತರರ)	40 ವರ್ಷಗಳು

(2) **ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕಕ್ಕೆ ಇರುವಂತೆ ಅಭ್ಯರ್ಥಿಯ ವಯೋಮಾನ ಲೆಕ್ಕಾಚಾರ ಮಾಡತಕ್ಕದ್ದು.**

Scanned with CamScanner

Scanned with OKEN Scanner

9. ಅಭ್ಯರ್ಥಿಗಳ ಆಯ್ಕೆ ಪಟ್ಟಿ, - (1) ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಪೂರ್ವದಲ್ಲಿ ಅಧಿಸೂಚಿತ ಖಾಲಿ ಹುದ್ದೆಗಳ ಸಂಖ್ಯೆಯ ಎರಡರಷ್ಟು ಪ್ರಮಾಣದಲ್ಲಿ ಅರ್ಹತೆಯ ಆಧಾರದ ಮೇಲೆ ದಾಖಲೆಗಳ ಪರಿಶೀಲನೆಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಪ್ರಾಧಿಕಾರಿಯು ಆಹ್ವಾನಿಸತಕ್ಕದ್ದು.

(2) ದಾಖಲೆಗಳ ಪರಿಶೀಲನೆಯ ನಂತರದಲ್ಲಿ ಅಧಿಸೂಚನೆಗೊಂಡ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾದ ಸಂಖ್ಯೆಯಲ್ಲಿ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಆಯ್ಕೆ ಪ್ರಾಧಿಕಾರಿಯು ಪ್ರಕಟಿಸತಕ್ಕದ್ದು.

(3) ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾದಲ್ಲಿ ಆಯ್ಕೆ ಪ್ರಾಧಿಕಾರಿಯು ಅಂತಹ ಆಕ್ಷೇಪಣೆಗಳನ್ನು ಪರಿಗಣಿಸಿ, ನಂತರ ಅಧಿಸೂಚಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾದ ಸಂಖ್ಯೆಯಲ್ಲಿ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

(4) ಅರ್ಜಿಯಲ್ಲಿ ಅಭ್ಯರ್ಥಿಗಳು ಕೋರಿದ ಆದ್ಯತೆಯನ್ನು ಆಯ್ಕೆ ಪ್ರಾಧಿಕಾರಿಯು ಸಾಧ್ಯವಾದಷ್ಟು ಮಟ್ಟಿಗೆ ಪರಿಗಣಿಸತಕ್ಕದ್ದು.

(5) ಮೇಲಿನಂತೆ ಸಿದ್ಧಪಡಿಸಲಾದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ನೇಮಕಾತಿ ಪ್ರಾಧಿಕಾರವು ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರುಗಳ ಅನುಕ್ರಮದಲ್ಲಿಯೇ ನೇಮಕಾತಿಗೆ ಪರಿಗಣಿಸತಕ್ಕದ್ದು.

(6) ಈ ನಿಯಮದ ಅಡಿಯಲ್ಲಿ ಪ್ರಕಟವಾಗಿರುವ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ಪ್ರಕಟಗೊಂಡ ಮಾತ್ರಕ್ಕೆ ನೇಮಕಾತಿ ಹಕ್ಕು ದೊರೆತಂತೆ ಆಗುವುದಿಲ್ಲ.

10. ಹೆಚ್ಚುವರಿ ಪಟ್ಟಿ, - (1) ಈ ನಿಯಮದಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿದ ರೀತಿಯಲ್ಲಿಯೇ ನೇಮಕಾತಿ ಪ್ರಾಧಿಕಾರವು ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿಯಲ್ಲಿ ಸೇರಿರದ ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿಯಲ್ಲಿನ ಯಾವುದೇ ಅಭ್ಯರ್ಥಿಗೆ ನೇಮಕಾತಿ ಆದೇಶವನ್ನು ನೀಡಲಾಗಿದ್ದು, ಆತನು ನಿಗದಿತ ಅಥವಾ ವಿಸ್ತೃತ ಸೇರುವಿಕೆ ಕಾಲದ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಫಲರಾದರೆ ನೇಮಕಾತಿ ಪ್ರಾಧಿಕಾರವು ಹೆಚ್ಚುವರಿ ಪಟ್ಟಿಯ ಅಭ್ಯರ್ಥಿಗೆ ನೇಮಕಾತಿ ಆದೇಶವನ್ನು ನೀಡಬಹುದು. ಕರ್ತವ್ಯಕ್ಕೆ ಹಾಜರಾಗಲು ವಿಫಲರಾದ ಅಭ್ಯರ್ಥಿಯ ಜಾಗದಲ್ಲಿ ಆಯ್ಕೆಯಾಗುವ ಅಂತಹ ಅಭ್ಯರ್ಥಿಯ ಅರ್ಹತೆಯ ಅನುಕ್ರಮದಂತೆ ಹೆಚ್ಚುವರಿ ಪಟ್ಟಿಯಲ್ಲಿನ ಅದೇ ವಿಷಯ, ವರ್ಗ, ಲಂಬ ಮೀಸಲಾತಿ ಮತ್ತು ಸಮತಳ ಮೀಸಲಾತಿಗೆ ಸೇರಿದ ಅಭ್ಯರ್ಥಿಯಾಗಿರತಕ್ಕದ್ದು.

(2) ಹೆಚ್ಚುವರಿ ಪಟ್ಟಿಯಲ್ಲಿ ಸೇರಿಸಬೇಕಾದ ಒಟ್ಟು ಅಭ್ಯರ್ಥಿಗಳ ಸಂಖ್ಯೆಯು ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿಯಲ್ಲಿನ ಒಟ್ಟು ಅಭ್ಯರ್ಥಿಗಳ ಶೇಕಡಾ ಹತ್ತನ್ನು ಮೀರತಕ್ಕದ್ದಲ್ಲ.

(3) ನೇಮಕಾತಿ ಪ್ರಾಧಿಕಾರವು ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯು ಪ್ರಕಟಗೊಂಡ ದಿನಾಂಕದಿಂದ ಆರು (6) ತಿಂಗಳ ಅವಧಿಗೆ ಮಾತ್ರ ಸಿಂಧುವಾಗಿರತಕ್ಕದ್ದು.

11. ಅಭ್ಯರ್ಥಿಗಳ ನೇಮಕಾತಿ, - (1) ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ನೇಮಕಾತಿ ಪ್ರಾಧಿಕಾರಿಯು ಅಂತಹ ಪ್ರತಿಯೊಬ್ಬ ಅಭ್ಯರ್ಥಿಯು ಸಲ್ಲಿಸಿದ ಪ್ರಮಾಣಪತ್ರಗಳ ಸತ್ಯಾಸತ್ಯತೆ ಮತ್ತು ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಬಂಧನೆಗಳಿಗೆ ಅನುಸಾರವಾಗಿ ಅವರ ಸೂಕ್ತತೆ ಮತ್ತು ದೈಹಿಕ ಸದೃಢತೆಯ ಬಗ್ಗೆಯೂ ಪರಿಶೀಲಿಸಿಕೊಂಡು, ಖಾತ್ರಿಪಡಿಸಿಕೊಂಡು ಅದೇ ಅನುಕ್ರಮದಲ್ಲಿ ನೇಮಕಾತಿಗೆ ಪರಿಗಣಿಸತಕ್ಕದ್ದು.

12. ಸೇವಾನಿರತ ಶಿಕ್ಷಕರ ಅರ್ಹತೆ, - ಈಗಾಗಲೇ ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ (ಸೇವಾನಿರತ) ಶಿಕ್ಷಕರೊಬ್ಬರು ಅವರು ಯಾವ ವೃಂದದ ಹುದ್ದೆಯನ್ನು ಹೊಂದಿದ್ದಾರೋ ಅದೇ ವೃಂದದ ಹುದ್ದೆಗೆ ಈ ವಿಶೇಷ ನಿಯಮಗಳಡಿ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ.

Scanned with CamScanner

Scanned with OKEN Scanner

ಅನುಸೂಚಿ – I
(ನಿಯಮ-2 ನೋಡುವುದು)

ಕ್ರ. ಸಂ.	ಹುದ್ದೆಯ ವರ್ಗ ಮತ್ತು ವೇತನ ಶ್ರೇಣಿ	ಕನಿಷ್ಟ ವಿದ್ಯಾರ್ಹತೆ
1	2	3
1.	**ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ)** **ರೂ.41300-81800** ಟಿಪ್ಪಣಿ : ನೇಮಕಾತಿ ಹೊಂದಲಿರುವ ಶಿಕ್ಷಕರನ್ನು, ಶಾಲೆಯಲ್ಲಿನ ಮತ್ತು ಹತ್ತಿರದ ಶಾಲೆಯಲ್ಲಿನ ಕಾರ್ಯಭಾರವನ್ನು ಪರಿಗಣಿಸಿ, ಕಾರ್ಯ ಹಂಚಿಕೆ ಮಾಡಬಹುದಾಗಿದೆ.	ವಿದ್ಯಾರ್ಹತೆ.- (1) ಪಿಯುಸಿಯಲ್ಲಿ ಕನಿಷ್ಟ ಶೇ.50 ಅಂಕಗಳು ಮತ್ತು ಎಲಿಮೆಂಟರಿ ಶಿಕ್ಷಣದಲ್ಲಿ ಎರಡು ವರ್ಷದ ಡಿಪ್ಲೋಮಾ ಅಥವಾ ಪಿಯುಸಿಯಲ್ಲಿ ಕನಿಷ್ಟ ಶೇ.50 ಅಂಕಗಳು ಮತ್ತು ಎಲಿಮೆಂಟರಿ ಶಿಕ್ಷಣದಲ್ಲಿ ನಾಲ್ಕು ವರ್ಷಗಳ ಪದವಿ ಅಥವಾ ಪಿಯುಸಿಯಲ್ಲಿ ಕನಿಷ್ಟ ಶೇ.50 ಅಂಕಗಳು ಮತ್ತು ಎರಡು ವರ್ಷಗಳ ಶಿಕ್ಷಣ ಡಿಪ್ಲೋಮಾ (ವಿಶೇಷ ಶಿಕ್ಷಣ) ಮತ್ತು (2) ಕರ್ನಾಟಕ ಸರ್ಕಾರ ಅಥವಾ ಭಾರತ ಸರ್ಕಾರ ನಡೆಸುವ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿ.ಇ.ಟಿ.) ಯಲ್ಲಿ ಉತ್ತೀರ್ಣರಾಗಿರತಕ್ಕದ್ದು. ಮತ್ತು (3) ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ ನಿಯಮಿಸಿರಬಹುದಾದ ಇನ್ಯಾವುದೇ ಉನ್ನತ ಅಥವಾ ಹೆಚ್ಚುವರಿ ಅರ್ಹತೆಗಳು. ಪರಂತು, ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಸೇರಿದ ಅಭ್ಯರ್ಥಿಯಾಗಿದ್ದಲ್ಲಿ ಅಥವಾ ಅಂಗವೈಕಲ್ಯವುಳ್ಳ ಅಭ್ಯರ್ಥಿಯಾಗಿದ್ದಲ್ಲಿ ಪಿಯುಸಿಯಲ್ಲಿ ಕನಿಷ್ಟ ಶೇಕಡ ನಲವತ್ತೈದು ಅಂಕಗಳನ್ನು ಪಡೆದಿರತಕ್ಕದ್ದು. ಟಿಪ್ಪಣಿ.- ಈ ನಿಯಮಗಳ ಉದ್ದೇಶಕ್ಕಾಗಿ, i) ಎಲಿಮೆಂಟರಿ ಶಿಕ್ಷಣ ಡಿಪ್ಲೋಮಾ ಅಥವಾ ಪದವಿ ಎಂದರೆ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್.ಸಿ.ಟಿ.ಇ) ನಿಂದ ಅಂಗೀಕೃತ ಡಿಪ್ಲೋಮಾ ಅಥವಾ ಪದವಿ. ii) ವಿಶೇಷ ಶಿಕ್ಷಣ ಡಿಪ್ಲೋಮಾ ಅಥವಾ ಪದವಿ ಎಂದರೆ ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ (ಆರ್.ಸಿ.ಐ.) ದಿಂದ ಅಂಗೀಕೃತ ಡಿಪ್ಲೋಮಾ ಅಥವಾ ಪದವಿ.
2.	**ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-II (ರೂ.41300-81800) (1 ರಿಂದ 8ನೇ ತರಗತಿ)**	ವಿದ್ಯಾರ್ಹತೆ.- ಸರ್ಕಾರಿ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-II ಹುದ್ದೆಗೆ:- (ಎ) ಅಂಗೀಕೃತ ಮಂಡಳಿ ನಡೆಸುವ ಹಿರಿಯ ಮಾಧ್ಯಮಿಕ (12ನೇ ತರಗತಿ ಅಥವಾ ತತ್ಸಮಾನ) ತರಗತಿಯಲ್ಲಿ ಕನಿಷ್ಟ ಶೇ.50 ಅಂಕಗಳು ಅಥವಾ ಅಂಗೀಕೃತ ಮಂಡಳಿಯು ನಡೆಸುವ ಹಿರಿಯ ಮಾಧ್ಯಮಿಕ (+2 ಅಥವಾ ತತ್ಸಮಾನ) ತರಗತಿಯಲ್ಲಿ ಉತ್ತೀರ್ಣಗೊಂಡಿದ್ದಲ್ಲಿ, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಮಾನ್ಯತೆಗಾಗಿ ನಾರ್ಮ್ಸ್ ಮತ್ತು ಪ್ರೊಸಿಜರ್ಸ್) ನಿಯಮಾವಳಿಗಳು, 2007 (10.07.2007 ರಲ್ಲಿ ಅಧಿಸೂಚನೆಗೊಂಡಿರುವಂತೆ) ರಲ್ಲಿ ನಿಗದಿಯಿರುವಂತೆ ಶಾಲೆ / ಕಾಲೇಜು / ಜಿಲ್ಲಾ ಹಂತದ ಕ್ರೀಡೆಗಳು / ಆಟಗಳಲ್ಲಿ ಭಾಗವಹಿಸಿರತಕ್ಕದ್ದು. ಅಥವಾ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಫಾರ್ಮ್ಸ್ ಆಫ್ ಅಪ್ಲಿಕೇಶನ್, ಫಾರ್ ರೆಕಗ್ನಿಷನ್, ದಿ ಟೈಮ್ ಲಿಮಿಟ್ ಆಫ್ ಸಬ್ಮಿಷನ್ ಆಫ್ ಅಪ್ಲೀಕೇಶನ್, ಡಿಟರ್ಮಿನೇಷನ್ ಆಫ್ ನಾರ್ಮ್ಸ್ ಅಂಡ್

Scanned with CamScanner

Scanned with OKEN Scanner

		ಸ್ಟಾಂಡರ್ಡ್ಸ್ ಫಾರ್ ರೆಕಗ್ನಿಷನ್ ಆಫ್ ಟೀಚರ್ ಎಜುಕೇಷನ್ ಪ್ರೋಗ್ರಾಮ್ಸ್ ಅಂಡ್ ಪರ್ಮಿಷನ್ ಟು ಸ್ಟಾರ್ಟ್ ನ್ಯೂ ಕೋರ್ಸ್ ಆರ್ ಟ್ರೈನಿಂಗ್) ನಿಯಮಗಳು, 2002 ದಿನಾಂಕ: 13.11.2002ರ ಅಧಿಸೂಚನೆಯಲ್ಲಿನಂತೆ ಮಾನ್ಯತೆ ಪಡೆದ ಮಂಡಳಿಯಿಂದ ಹಿರಿಯ ಮಾಧ್ಯಮಿಕ (12ನೇ ತರಗತಿ ಅಥವಾ ತತ್ಸಮಾನ) ತರಗತಿಯಲ್ಲಿ ಕನಿಷ್ಟ ಶೇ.45 ಅಂಕಗಳನ್ನು ಪಡೆದಿದ್ದಲ್ಲಿ; ಮತ್ತು (ಬಿ) ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್‌ನಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ದೈಹಿಕ ಶಿಕ್ಷಣ ಸರ್ಟೀಫಿಕೇಟ್ / ಡಿಪ್ಲೋಮಾ (ಅಥವಾ ತತ್ಸಮಾನ) ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. ಪರಂತು, ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಸೇರಿದ ಅಭ್ಯರ್ಥಿಯಾಗಿದ್ದಲ್ಲಿ ಅಥವಾ ಅಂಗವೈಕಲ್ಯವುಳ್ಳ ಅಭ್ಯರ್ಥಿಯಾಗಿದ್ದಲ್ಲಿ ಪಿಯುಸಿಯಲ್ಲಿ ಕನಿಷ್ಟ ಶೇಕಡ ನಲವತ್ತೈದು ಅಂಕಗಳನ್ನು ಪಡೆದಿರತಕ್ಕದ್ದು.
3.	**ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (6 ರಿಂದ 8ನೇ ತರಗತಿ) ರೂ.44425-83700**	1. ವಿದ್ಯಾರ್ಹತೆ.- (1) ಪದವಿಯಲ್ಲಿ ಕನಿಷ್ಟ ಸರಾಸರಿ ಶೇಕಡ ಐವತ್ತು ಅಂಕಗಳು ಮತ್ತು ಎಲಿಮೆಂಟರಿ ಶಿಕ್ಷಣದಲ್ಲಿ ಎರಡು ವರ್ಷಗಳ ಡಿಪ್ಲೋಮಾ. ಅಥವಾ ಪದವಿಯಲ್ಲಿ ಕನಿಷ್ಟ ಸರಾಸರಿ ಶೇಕಡ ಐವತ್ತು ಅಂಕಗಳು ಮತ್ತು ಬ್ಯಾಚುಲರ್ ಆಫ್ ಎಜುಕೇಷನ್ ಪದವಿ ಅಥವಾ ವಿಶೇಷ ಶಿಕ್ಷಣದಲ್ಲಿ ಪದವಿ; ಅಥವಾ ಪಿಯುಸಿಯಲ್ಲಿ ಕನಿಷ್ಟ ಶೇಕಡ ಐವತ್ತು ಅಂಕಗಳು ಮತ್ತು ಎಲಿಮೆಂಟರಿ ಶಿಕ್ಷಣದಲ್ಲಿ ನಾಲ್ಕು ವರ್ಷಗಳ ಪದವಿ ಅಥವಾ ಶಿಕ್ಷಕರ ಶಿಕ್ಷಣದಲ್ಲಿ ನಾಲ್ಕು ವರ್ಷಗಳ ಪದವಿ: ಪರಂತು, ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಸೇರಿದ ಅಭ್ಯರ್ಥಿಯಾಗಿದ್ದಲ್ಲಿ ಅಥವಾ ಅಂಗವೈಕಲ್ಯವುಳ್ಳ ಅಭ್ಯರ್ಥಿಯಾಗಿದ್ದಲ್ಲಿ ಪದವಿ ಅಥವಾ ಪಿಯುಸಿಯಲ್ಲಿ ಕನಿಷ್ಟ ಶೇಕಡ ನಲವತ್ತೈದು ಅಂಕಗಳನ್ನು ಪಡೆದಿರತಕ್ಕದ್ದು. ಮತ್ತು (2) ಕರ್ನಾಟಕ ಸರ್ಕಾರ ಅಥವಾ ಭಾರತ ಸರ್ಕಾರ ನಡೆಸುವ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿ.ಇ.ಟಿ.) ಯಲ್ಲಿ ಉತ್ತೀರ್ಣರಾಗಿರತಕ್ಕದ್ದು. ಮತ್ತು (3) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಭಾಷೆ) ಹುದ್ದೆಯಾಗಿದ್ದಲ್ಲಿ (ಎ) ಅಭ್ಯರ್ಥಿಯು ಪದವಿಯಲ್ಲಿ ಆಯಾ ಭಾಷೆ ಜೊತೆಗೆ (ಸಂಬಂಧಿಸಿದ ಭಾಷೆಯನ್ನು ಹೊರತುಪಡಿಸಿದಂತೆ) ಕನ್ನಡ / ಆಂಗ್ಲ / ಹಿಂದಿ / ಮರಾಠಿ / ಉರ್ದು / ತೆಲುಗು / ತಮಿಳು / ಮಲಯಾಳಂ / ಕೊಂಕಣಿ / ಸಂಸ್ಕೃತ / ಇತಿಹಾಸ / ಅರ್ಥಶಾಸ್ತ್ರ / ರಾಜಕೀಯ ಶಾಸ್ತ್ರ / ಭೂಗೋಳಶಾಸ್ತ್ರ / ಸಮಾಜ ಶಾಸ್ತ್ರ ವಿಷಯಗಳಲ್ಲಿ ಯಾವುದಾದರೊಂದು ವಿಷಯವನ್ನು ಐಚ್ಛಿಕ ವಿಷಯವನ್ನಾಗಿ ಮೂರೂ ವರ್ಷಗಳಲ್ಲಿ ಅಭ್ಯಾಸಿಸಿರಬೇಕು;
	i) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಭಾಷೆ)	
	ii) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಗಣಿತ ಮತ್ತು ವಿಜ್ಞಾನ)	ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಗಣಿತ ಮತ್ತು ವಿಜ್ಞಾನ) ಹುದ್ದೆಗೆ ಅಭ್ಯರ್ಥಿಯಾಗಿದ್ದಲ್ಲಿ: (ಎ) ಪದವಿಯಲ್ಲಿ ಗಣಿತ ವ್ಯಾಸಂಗ ಮಾಡಿದ್ದು, ಕಡ್ಡಾಯವಾಗಿ ಭೌತಶಾಸ್ತ್ರವನ್ನು ಪದವಿಯ ಮೂರೂ ವರ್ಷಗಳಲ್ಲಿ ಹಾಗೂ ರಸಾಯನಶಾಸ್ತ್ರ / ಗಣಕ ವಿಜ್ಞಾನ / ಎಲೆಕ್ಟ್ರಾನಿಕ್ಸ್ / ಸಂಖ್ಯಾಶಾಸ್ತ್ರ

Scanned with CamScanner

Scanned with OKEN Scanner

		/ ಭೂಗೋಳ ಶಾಸ್ತ್ರ / ಗೃಹ ವಿಜ್ಞಾನ / ಭೂಗರ್ಭಶಾಸ್ತ್ರ / ಕಂಪ್ಯೂಟರ್ ಅಪ್ಲಿಕೇಶನ್ಸ್ ವಿಷಯಗಳಲ್ಲಿ ಒಂದು ವಿಷಯವನ್ನು ಮೂರನೇ ಐಚ್ಛಿಕ ವಿಷಯವನ್ನಾಗಿ ಕಡ್ಡಾಯವಾಗಿ ಪದವಿಯಲ್ಲಿ ಮೂರು ವರ್ಷಗಳೂ ಅಭ್ಯಾಸ ಮಾಡಿರತಕ್ಕದ್ದು. ಅಥವಾ ವಾಸ್ತುಶಿಲ್ಪದ ಪದವೀಧರರಲ್ಲದ ಇಂಜನಿಯರಿಂಗ್ ಪದವೀಧರರು ಪ್ರಥಮ, ಮೂರು / ನಾಲ್ಕು ಸೆಮಿಸ್ಟರ್‌ಗಳಲ್ಲಿ ಗಣಿತ ಮತ್ತು ಉಳಿದ ಸೆಮಿಸ್ಟರ್‌ಗಳಲ್ಲಿ ಗಣಿತವನ್ನಾಧರಿಸಿದ ವಿಷಯಗಳನ್ನು ಅಭ್ಯಾಸ ಮಾಡಿರಬೇಕು. (ಬಿ) ಪದವೀದರರಾಗಿದ್ದಲ್ಲಿ ಪದವಿಯಲ್ಲಿ ಶೇಕಡ ಐವತ್ತು ಸರಾಸರಿ ಅಂಕಗಳನ್ನು / ಇಂಜಿನಿಯರಿಂಗ್ ಪದವೀಧರರಾಗಿದ್ದಲ್ಲಿ ಗಣಿತ ಮತ್ತು ಅನ್ವಯಿತ ಗಣಿತ ವಿಷಯವನ್ನು ವ್ಯಾಸಂಗ ಮಾಡಿರತಕ್ಕದ್ದು ಹಾಗೂ ಪದವಿಯಲ್ಲಿ ಶೇಕಡ ಐವತ್ತು ಸರಾಸರಿ ಅಂಕಗಳನ್ನು ಗಳಿಸಿರತಕ್ಕದ್ದು. ಮತ್ತು (ಸಿ) ಸದರಿ ಮೂರು ವಿಷಯಗಳಲ್ಲಿ ಕನಿಷ್ಟ ಒಂದು ವಿಷಯದಲ್ಲಿಯಾದರೂ ಅಭ್ಯಾಸ ಬೋಧನೆ / ಬೋಧನಾ ವಿಧಾನವನ್ನು ಶಿಕ್ಷಕರ ಶಿಕ್ಷಣ ಡಿಪ್ಲೋಮಾ ಅಥವಾ ಪದವಿಯಲ್ಲಿ ಅಭ್ಯಾಸ ಮಾಡಿರತಕ್ಕದ್ದು.
	iii) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಜೀವಶಾಸ್ತ್ರ)	ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಜೀವಶಾಸ್ತ್ರ) ಹುದ್ದೆಗೆ (ಈ ಹುದ್ದೆಗಳು ವಿಜ್ಞಾನ ಮತ್ತು ಗಣಿತ ವಿಷಯದ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ : ಶಿಕ್ಷಕ ಅನುಪಾತದನುಸಾರ ಹುದ್ದೆ ಇರುವ ಶಾಲೆಯಲ್ಲಿ ಮಾತ್ರ ಇರುತ್ತವೆ. ಅಂತಹ ಶಾಲೆಯಲ್ಲಿನ ಮೇಲಿನ ಎರಡನೇ ಹುದ್ದೆಯು ಜೀವಶಾಸ್ತ್ರ ವಿಷಯದ ಹುದ್ದೆಯಾಗಿ ನಾಮಾಂಕನಗೊಳ್ಳುತ್ತದೆ) ಅಭ್ಯರ್ಥಿಯಾಗಿದ್ದಲ್ಲಿ: (ಎ) ಪದವಿಯಲ್ಲಿ ರಸಾಯನಶಾಸ್ತ್ರವನ್ನು ಕಡ್ಡಾಯವಾಗಿ ಮೂರು ವರ್ಷಗಳೂ ವ್ಯಾಸಂಗ ಮಾಡಿದ್ದು, ಸಸ್ಯಶಾಸ್ತ್ರ / ಪ್ರಾಣಿಶಾಸ್ತ್ರ / ರೇಷ್ಮೆಕೃಷಿ / ಪರಿಸರಶಾಸ್ತ್ರ / ತಳಿಶಾಸ್ತ್ರ / ಸೂಕ್ಷ್ಮ ಜೀವ ವಿಜ್ಞಾನ ಶಾಸ್ತ್ರ / ಜೈವಿಕ ತಂತ್ರಜ್ಞಾನ / ಆಹಾರ ವಿಜ್ಞಾನ ಮತ್ತು ಪೋಷಣೆ / ಮೀನುಗಾರಿಕೆ ಮತ್ತು ಕೈಗಾರಿಕಾ ಮೀನುಗಾರಿಕೆ ವಿಜ್ಞಾನ / ಜೀವರಸಾಯನ ಶಾಸ್ತ್ರ / ಅಪ್ಲೈಡ್ ಕೆಮಿಸ್ಟ್ರಿ / ಗಣಿತ ವಿಷಯಗಳಲ್ಲಿ ಯಾವುದಾದರೂ ಎರಡೂ ವಿಷಯಗಳನ್ನು ಕಡ್ಡಾಯವಾಗಿ ಪದವಿಯಲ್ಲಿ ಮೂರು ವರ್ಷಗಳೂ ಅಭ್ಯಾಸ ಮಾಡಿರತಕ್ಕದ್ದು. ಮತ್ತು (ಬಿ) ಸದರಿ ಮೂರು ವಿಷಯಗಳಲ್ಲಿ ಕನಿಷ್ಟ ಒಂದು ವಿಷಯದಲ್ಲಿಯಾದರೂ ಅಭ್ಯಾಸ ಬೋಧನೆ / ಬೋಧನಾ ವಿಧಾನವನ್ನು ಶಿಕ್ಷಕರ ಶಿಕ್ಷಣ ಡಿಪ್ಲೋಮಾ ಅಥವಾ ಪದವಿಯಲ್ಲಿ ಅಭ್ಯಾಸ ಮಾಡಿರತಕ್ಕದ್ದು.
	iv) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಸಮಾಜ ಪಾಠಗಳು) ಟಿಪ್ಪಣಿ: ಕ್ರಮ ಸಂಖ್ಯೆ (i) ಮತ್ತು (iv) ರಲ್ಲಿನ ವರ್ಗದ ಶಿಕ್ಷಕರನ್ನು, ಶಾಲೆಯಲ್ಲಿನ ಮತ್ತು ಹತ್ತಿರದ ಶಾಲೆಯಲ್ಲಿನ ಕಾರ್ಯಭಾರವನ್ನು	ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಸಮಾಜ ಪಾಠಗಳು) ಹುದ್ದೆಗೆ ಅಭ್ಯರ್ಥಿಯಾಗಿದ್ದಲ್ಲಿ: (ಎ) ಪದವಿಯಲ್ಲಿ ಕೆಳಗಿನ ವಿಷಯಗಳಲ್ಲಿ ಎರಡು ವಿಷಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ಅಭ್ಯಾಸ ಮಾಡಿರತಕ್ಕದ್ದು: (ಬಿ) ಸಮಾಜ ಪಾಠಗಳು ಸಮೂಹದ ಇತಿಹಾಸ / ಅರ್ಥಶಾಸ್ತ್ರ / ಭೂಗೋಳಶಾಸ್ತ್ರ / ರಾಜಕೀಯ ಶಾಸ್ತ್ರ / ಸಮಾಜಶಾಸ್ತ್ರ ಇವುಗಳಲ್ಲಿಯೇ ಎರಡು ವಿಷಯಗಳು. ಅಥವಾ (ಸಿ) ಸಮಾಜ ಪಾಠಗಳು ಸಮೂಹದ ಇತಿಹಾಸ / ಅರ್ಥಶಾಸ್ತ್ರ / ಭೂಗೋಳಶಾಸ್ತ್ರ / ರಾಜಕೀಯ ಶಾಸ್ತ್ರ / ಸಮಾಜಶಾಸ್ತ್ರ /

Scanned with CamScanner

Scanned with OKEN Scanner

	ಪರಿಗಣಿಸಿ, ಅವರು ನೇಮಕಾತಿಯಾಗಿರುವ ವಿಷಯಗಳಲ್ಲದೆ, ಇತರೆ ವಿಷಯಗಳನ್ನು ಸಹ ಬೋಧಿಸಲು ಕಾರ್ಯ ಹಂಚಿಕೆ ಮಾಡಬಹುದಾಗಿದೆ.	ಸಂಖ್ಯಾಶಾಸ್ತ್ರ / ಪರಿಸರ ಅಧ್ಯಯನ / ಮಾನವ ಸಂಪನ್ಮೂಲ ನಿರ್ವಹಣೆ / ವಾಣಿಜ್ಯ ಶಾಸ್ತ್ರ / ಗ್ರಾಮೀಣ ಅಭಿವೃದ್ಧಿ ಇವುಗಳ ಪೈಕಿ ಒಂದು ವಿಷಯ ಹಾಗೂ ಭಾಷಾ ಸಮೂಹದ ಕನ್ನಡ / ಆಂಗ್ಲ / ಹಿಂದಿ / ಮರಾಠಿ/ ಉರ್ದು / ತಮಿಳು/ ತೆಲುಗು / ಕೊಂಕಣಿ / ಸಂಸ್ಕೃತ ಭಾಷೆಗಳ ಪೈಕಿ ಒಂದು ವಿಷಯ. ಮತ್ತು (ಡಿ) ಸಮಾಜ ಪಾಠಗಳು ಸಮೂಹದ ಕನಿಷ್ಟ ಒಂದು ವಿಷಯದಲ್ಲಿಯಾದರೂ ಅಭ್ಯಾಸ ಬೋಧನೆ / ಬೋಧನಾ ವಿಧಾನವನ್ನು ಶಿಕ್ಷಕರ ಶಿಕ್ಷಣ ಡಿಪ್ಲೋಮಾ ಅಥವಾ ಪದವಿಯಲ್ಲಿ ಅಭ್ಯಾಸ ಮಾಡಿರತಕ್ಕದ್ದು. ಮತ್ತು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ ನಿಯಮಿಸಿರಬಹುದಾದ ಇನ್ಯಾವುದೇ ಉನ್ನತ ಅಥವಾ ಹೆಚ್ಚುವರಿ ಅರ್ಹತೆಗಳು. ಟಿಪ್ಪಣಿ.- ಈ ನಿಯಮಗಳ ಉದ್ದೇಶಕ್ಕಾಗಿ, (i) ನಾಲ್ಕು ವರ್ಷಗಳ ಸಂಯೋಜಿತ ಶಿಕ್ಷಕರ ಶಿಕ್ಷಣ ಪದವಿಯನ್ನು ಹೊಂದಿರುವ ಅಭ್ಯರ್ಥಿಯಾಗಿದ್ದಲ್ಲಿ, ಮೇಲಿನಂತೆ ಸಂಬಂಧಿತ ಐಚ್ಛಿಕ ವಿಷಯಗಳನ್ನು ವ್ಯಾಸಂಗ ಮಾಡಿರತಕ್ಕದ್ದು ಎಂಬುದಕ್ಕೆ ಪದವಿಯಲ್ಲಿ ಮೂರು ವರ್ಷಗಳು ಕಡ್ಡಾಯವಾಗಿ ಓದಿರಬೇಕು ಎಂಬ ನಿಯಮ ಅನ್ವಯವಾಗುವುದಿಲ್ಲ. (ii) ಎಲಿಮೆಂಟರಿ ಶಿಕ್ಷಣ ಡಿಪ್ಲೋಮಾ ಅಥವಾ ಪದವಿ ಎಂದರೆ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್.ಸಿ.ಟಿ.ಇ) ನಿಂದ ಅಂಗೀಕೃತ ಡಿಪ್ಲೋಮಾ ಅಥವಾ ಪದವಿ. (iii) ವಿಶೇಷ ಶಿಕ್ಷಣ ಡಿಪ್ಲೋಮಾ ಅಥವಾ ಪದವಿ ಎಂದರೆ ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ (ಆರ್.ಸಿ.ಐ.) ದಿಂದ ಅಂಗೀಕೃತ ಪದವಿ.
4.	**ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8ನೇ ತರಗತಿ) (ರೂ.44425-83700)**	ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾನಿಲಯದ ಈ ಕೆಳಕಂಡ ಯಾವುದಾದರೊಂದು ಸ್ನಾತಕ ಪದವಿಯಲ್ಲಿ ಕನಿಷ್ಠ ಸರಾಸರಿ ಶೇಕಡ ಐವತ್ತು ಅಂಕಗಳನ್ನು ಹೊಂದಿರತಕ್ಕದ್ದು:- ಬ್ಯಾಚುಲರ್ ಆಫ್ ಸೈನ್ಸ್ (ಕಂಪ್ಯೂಟರ್ ಸೈನ್ಸ್) ಅಥವಾ ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ಸ್ ಅಥವಾ ಬ್ಯಾಚುಲರ್ ಆಫ್ ಇಂಜಿನಿಯರಿಂಗ್ (ಕಂಪ್ಯೂಟರ್ ಸೈನ್ಸ್) / (ಇನ್ಫಾರ್ಮೆಷನ್ ಸೈನ್ಸ್) / (ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್) ಅಥವಾ ಬ್ಯಾಚುಲರ್ ಆಫ್ ಟೆಕ್ನಾಲಜಿ (ಕಂಪ್ಯೂಟರ್ ಸೈನ್ಸ್) / (ಇನ್ಫಾರ್ಮೆಷನ್ ಸೈನ್ಸ್) / (ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್) ಮತ್ತು ಶಾಲಾ ಶಿಕ್ಷಣ ಇಲಾಖೆಯ ಗಣಕ ವಿಜ್ಞಾನ ಶಿಕ್ಷಕರಾಗಿ ನೇಮಕಾತಿ ಹೊಂದಿದಲ್ಲಿ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್.ಸಿ.ಟಿ.ಇ.) ನಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ನೇಮಕಾತಿಗೊಂಡ 5 ವರ್ಷಗಳ ಒಳಗಾಗಿ ಶಿಕ್ಷಣದಲ್ಲಿ ಪದವಿ (ಬಿ.ಎಡ್.) ಅರ್ಹತೆಯನ್ನು ಗಳಿಸಿಕೊಳ್ಳತಕ್ಕದ್ದು. 5 ವರ್ಷಗಳ ಒಳಗಾಗಿ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ಪೂರ್ಣಗೊಳಿಸತಕ್ಕದ್ದು. ಪರಂತು, ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಸೇರಿದ ಅಭ್ಯರ್ಥಿಯಾಗಿದ್ದಲ್ಲಿ ಅಥವಾ ಅಂಗವೈಕಲ್ಯವುಳ್ಳ ಅಭ್ಯರ್ಥಿಯಾಗಿದ್ದಲ್ಲಿ ಪದವಿಯಲ್ಲಿ ಕನಿಷ್ಟ ಶೇಕಡ ನಲವತ್ತೈದು ಅಂಕಗಳನ್ನು ಪಡೆದಿರತಕ್ಕದ್ದು.

Scanned with CamScanner

Scanned with OKEN Scanner

5.	**ಪ್ರೌಢಶಾಲಾ ಸಹ ಶಿಕ್ಷಕರು (ರೂ.54175-99400)** ಸರ್ಕಾರಿ ಪ್ರೌಢಶಾಲೆ, ಸಂಯುಕ್ತ ಪದವಿ ಪೂರ್ವ ಕಾಲೇಜು, ಸಂಯುಕ್ತ ಪ್ರೌಢಶಾಲೆಗಳಲ್ಲಿನ ಕೆಳಗೆ ಕಾಣಿಸಿರುವ ವರ್ಗಗಳ ಸಹ ಶಿಕ್ಷಕ / ಶಿಕ್ಷಕಿ ಹುದ್ದೆಗಳನ್ನು ಒಳಗೊಂಡಂತೆ:- 1. ಸಹ ಶಿಕ್ಷಕರು (ಕಲಾ): ಕನ್ನಡ ಮತ್ತು ಆಂಗ್ಲ ಭಾಷಾ ಮಾಧ್ಯಮ 2. ಸಹ ಶಿಕ್ಷಕರು (ಜೀವಶಾಸ್ತ್ರ): ಕನ್ನಡ ಮತ್ತು ಆಂಗ್ಲ ಭಾಷಾ ಮಾಧ್ಯಮ	ವಿದ್ಯಾರ್ಹತೆ-: ಪದವಿಯಲ್ಲಿ ಕನಿಷ್ಟ ಸರಾಸರಿ ಶೇಕಡ ಐವತ್ತು ಅಂಕಗಳು ಮತ್ತು ಬ್ಯಾಚುಲರ್ ಆಫ್ ಎಜುಕೇಷನ್ ಪದವಿಯನ್ನು ಹೊಂದಿರತಕ್ಕದ್ದು. ಪರಂತು, ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಸೇರಿದ ಅಭ್ಯರ್ಥಿಯಾಗಿದ್ದಲ್ಲಿ ಅಥವಾ ಅಂಗವೈಕಲ್ಯವುಳ್ಳ ಅಭ್ಯರ್ಥಿಯಾಗಿದ್ದಲ್ಲಿ ಪದವಿಯಲ್ಲಿ ಕನಿಷ್ಟ ಶೇಕಡ ನಲವತ್ತೈದು ಅಂಕಗಳನ್ನು ಪಡೆದಿರತಕ್ಕದ್ದು. 1. ಸಹ ಶಿಕ್ಷಕರು (ಕಲಾ): (ಎ) ಕಲಾ ವಿಷಯದಲ್ಲಿನ ಪದವಿಯಲ್ಲಿ ಕೆಳಗಿನ ಎರಡು ವಿಷಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ಅಭ್ಯಾಸ ಮಾಡಿರತಕ್ಕದ್ದು:- ಇತಿಹಾಸ, ಅರ್ಥಶಾಸ್ತ್ರ, ರಾಜಕೀಯಶಾಸ್ತ್ರ, ಭೂಗೋಳಶಾಸ್ತ್ರ ಹಾಗೂ ಸಮಾಜಶಾಸ್ತ್ರ. ಮತ್ತು (ಬಿ) ಬ್ಯಾಚುಲರ್ ಆಫ್ ಎಜುಕೇಷನ್ ಪದವಿಯನ್ನು ಹೊಂದಿರತಕ್ಕದ್ದು. 2. ಸಹ ಶಿಕ್ಷಕರು (ಜೀವಶಾಸ್ತ್ರ): (ಎ) ವಿಜ್ಞಾನ ವಿಷಯದ ಪದವಿಯಲ್ಲಿ ಕೆಳಗಿನ ಎರಡು ವಿಷಯಗಳನ್ನು ಅಭ್ಯಾಸ ಮಾಡಿರತಕ್ಕದ್ದು:- ರಸಾಯನಶಾಸ್ತ್ರ, ಸಸ್ಯಶಾಸ್ತ್ರ / ಪ್ರಾಣಿಶಾಸ್ತ್ರ / ಜೈವಿಕ ತಂತ್ರಜ್ಞಾನ / ತಳಿಶಾಸ್ತ್ರ / ಆಹಾರ ವಿಜ್ಞಾನ ಮತ್ತು ಪೋಷಣೆ / ಮೀನುಗಾರಿಕೆ ಮತ್ತು ಕೈಗಾರಿಕಾ ಮೀನುಗಾರಿಕೆ ವಿಜ್ಞಾನ / ಜೀವರಸಾಯನ ಶಾಸ್ತ್ರ. ರಸಾಯನಶಾಸ್ತ್ರ ಕಡ್ಡಾಯ ಐಚ್ಛಿಕ ವಿಷಯವಾಗಿರತಕ್ಕದ್ದು ಮತ್ತು (ಬಿ) ಬ್ಯಾಚುಲರ್ ಆಫ್ ಎಜುಕೇಷನ್ ಪದವಿಯನ್ನು ಹೊಂದಿರತಕ್ಕದ್ದು. ಮೇಲಿನ ವಿದ್ಯಾರ್ಹತೆಗಳ ಜೊತೆಗೆ (1) ಮತ್ತು (2) ರಲ್ಲಿನ ಹುದ್ದೆಗಳಿಗೆ :- (ಎ) ಯಾವ ಮಾಧ್ಯಮದಲ್ಲಿ ಪಾಠ ಬೋಧನೆ ಮಾಡುವರೋ ಆ ಭಾಷೆಯನ್ನು ಪದವಿ ಹಂತದಲ್ಲಿ ಅಭ್ಯಾಸಿಸಿರತಕ್ಕದ್ದು. (ಬಿ) ಯಾವ ಅಭ್ಯರ್ಥಿಯು ಸದರಿ ಭಾಷೆಯನ್ನು ಪದವಿ ಹಂತದಲ್ಲಿ ವ್ಯಾಸಂಗ ಮಾಡಿರುವುದಿಲ್ಲವೋ ಅಂತಹ ಅಭ್ಯರ್ಥಿಯು: ಎಸ್.ಎಸ್.ಎಲ್.ಸಿ.ಯಲ್ಲಿ ಆ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಾಸಿಸಿರತಕ್ಕದ್ದು. ಅಥವಾ ಪದವಿ ಅಥವಾ ಎಸ್.ಎಸ್.ಎಲ್.ಸಿ. ಹಂತದ ವ್ಯಾಸಂಗವನ್ನು ಆ ಮಾಧ್ಯಮದಲ್ಲಿ ಪೂರೈಸಿರತಕ್ಕದ್ದು. ಅಥವಾ ಯು.ಜಿ.ಸಿ. ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಆ ಭಾಷೆಯ ಡಿಪ್ಲೋಮಾ ಅರ್ಹತೆ ಹೊಂದಿರತಕ್ಕದ್ದು. ಅಥವಾ

Scanned with CamScanner

Scanned with OKEN Scanner

	3. ಭಾಷಾ ಸಹ ಶಿಕ್ಷಕರು: ಕನ್ನಡ ಮತ್ತು ಆಂಗ್ಲ ಭಾಷಾ ಮಾಧ್ಯಮ	ಕನ್ನಡ ಭಾಷೆಯಲ್ಲಿ ಬೋಧಿಸಬೇಕಾದ ಶಿಕ್ಷಕರಾಗಿದ್ದಲ್ಲಿ ಕರ್ನಾಟಕ ರಾಜ್ಯ ಪರೀಕ್ಷಾ ಹಾಗೂ ಮೌಲ್ಯ ನಿರ್ಣಯ ಮಂಡಳಿಯಿಂದ ಅಥವಾ ಕನ್ನಡ ಸಾಹಿತ್ಯ ಪರಿಷತ್ ನಿಂದ ಕನ್ನಡ ಭಾಷಾ ಸರ್ಟಿಫಿಕೇಟ್ ಕೋರ್ಸ್ ಅನ್ನು ಪೂರೈಸಿರತಕ್ಕದ್ದು. 1. ಭಾಷಾ ಸಹ ಶಿಕ್ಷಕರು: (ಎ) ಕಲಾ ವಿಷಯದಲ್ಲಿ ಪದವಿಯನ್ನು ಹೊಂದಿರತಕ್ಕದ್ದು ಮತ್ತು ಸದರಿ ಪದವಿಯಲ್ಲಿ ಕನ್ನಡ ಅಥವಾ ಆಂಗ್ಲ ಭಾಷೆಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಅಭ್ಯಾಸ ಮಾಡಿರತಕ್ಕದ್ದು. ಮತ್ತು (ಬಿ) ಬ್ಯಾಚುಲರ್ ಆಫ್ ಎಜುಕೇಷನ್ ಪದವಿಯನ್ನು ಹೊಂದಿರತಕ್ಕದ್ದು. ಪರಂತು, ಯಾವ ಅಭ್ಯರ್ಥಿಯು ಪದವಿಯಲ್ಲಿ ಸದರಿ ಭಾಷೆಯನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಾಸಿಸಿರುವುದಿಲ್ಲವೋ ಅಂತಹ ಅಭ್ಯರ್ಥಿಯು ಕೆಳಕಂಡ ಅರ್ಹತೆಯನ್ನು ಹೊಂದಿದ್ದಲ್ಲಿ ಪರಿಗಣಿಸಲಾಗುವುದು:- (ಎ) ಸದರಿ ಭಾಷೆಯ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದಲ್ಲಿ ಮತ್ತು ಅದೇ ವಿಷಯದ ಶಿಕ್ಷಣದಲ್ಲಿ ಪದವಿಯನ್ನು ಪಡೆದಿರತಕ್ಕದ್ದು ಅಥವಾ ಬೋಧನಾ ವಿಧಾನವನ್ನು ಅಭ್ಯಾಸಿಸಿರತಕ್ಕದ್ದು.
6.	**ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್-I) (ರೂ.54175-99400)** ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-I.	ದೈಹಿಕ ಶಿಕ್ಷಣವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿರುವ ಪದವಿ ವಿದ್ಯಾರ್ಹತೆಯಲ್ಲಿ ಶೇಕಡ 50 ರಷ್ಟು ಅಂಕಗಳನ್ನು ಪಡೆದಿರತಕ್ಕದ್ದು. ಅಥವಾ ದೈಹಿಕ ಶಿಕ್ಷಣವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿರುವ ಪದವಿ ವಿದ್ಯಾರ್ಹತೆಯಲ್ಲಿ ಶೇಕಡ 45 ರಷ್ಟು ಅಂಕಗಳನ್ನು ಪಡೆದಿದ್ದು ಅಸೋಷಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟಿ ಆಫ್ ಇಂಡಿಯನ್ ಒಲಂಪಿಕ್ ಅಸೋಸಿಯೇಷನ್ ನಿಂದ ಮಾನ್ಯತೆ ಪಡೆದ ಕ್ರೀಡೆಗಳು ಅಥವಾ ಆಟಗಳು ಅಥವಾ ಅಥ್ಲೇಟಿಕ್ಸ್ ನ ರಾಷ್ಟ್ರ, ಮಟ್ಟದ ಅಥವಾ ರಾಜ್ಯ ಮಟ್ಟದ ಅಥವಾ ಅಂತರ್ ವಿಶ್ವವಿದ್ಯಾಲಯ ಮಟ್ಟದ ಸ್ಪರ್ದೆಗಳಲ್ಲಿ ಪಾಲ್ಗೊಂಡಿರತಕ್ಕದ್ದು. ಅಥವಾ ನಿಯೋಜಿತ ಸೇವಾ ನಿರತ ಅಭ್ಯರ್ಥಿಗಳಾಗಿದ್ದಲ್ಲಿ (ತರಬೇತಿ ಹೊಂದಿದ ದೈಹಿಕ ಶಿಕ್ಷಣ ಶಿಕ್ಷಕರು / ತರಬೇತುದಾರರು) – ಪದವಿಯಲ್ಲಿ ಶೇ.45 ಅಂಕಗಳನ್ನು ಪಡೆದಿದ್ದು, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ರೆಕಗ್ನಿಶನ್ ನಾರ್ಮ್ಸ್ ಮತ್ತು ಪ್ರೊಸೀಜರ್ಸ್) ನಿಯಮಗಳು, 2009 ರಲ್ಲಿನಂತೆ ಕನಿಷ್ಟ ಮೂರು ವರ್ಷಗಳ ಬೋಧನಾ ಅನುಭವ ಹೊಂದಿರತಕ್ಕದ್ದು. ಅಥವಾ ಶೇಕಡ 40 ರಷ್ಟು ಅಂಕಗಳ ಸಹಿತ ದೈಹಿಕ ಶಿಕ್ಷಣದಲ್ಲಿ ಪದವಿ; ಅಥವಾ ಶೇಕಡ 40 ರಷ್ಟು ಅಂಕಗಳ ಸಹಿತ ದೈಹಿಕ ಶಿಕ್ಷಣವನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಾಸಿಸಿರುವ ಪದವಿ; ಅಥವಾ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ರೆಕಗ್ನಿಶನ್ ನಾರ್ಮ್ಸ್ ಮತ್ತು ಪ್ರೊಸೀಜರ್ಸ್) ನಿಯಮಗಳು, 2007, ದಿನಾಂಕ: 10.12.2007ರ ಅಧಿಸೂಚನೆಯಲ್ಲಿನಂತೆ ಪದವಿ ಅರ್ಹತೆಯ ಜೊತೆಗೆ ಶಾಲಾ,

Scanned with CamScanner

Scanned with OKEN Scanner

		ಅಂತರ ಕಾಲೇಜ್ ಕ್ರೀಡೆಗಳು, ಆಟಗಳಲ್ಲಿ ಪಾಲ್ಗೊಂಡಿದ್ದು, ಎನ್.ಸಿ.ಸಿ. "ಸಿ" ಸರ್ಟಿಫಿಕೇಟ್ ಹೊಂದಿರತಕ್ಕದ್ದು. ಅಥವಾ ಮೂರು ವರ್ಷಗಳ ಅವಧಿಯ ದೈಹಿಕ ಶಿಕ್ಷಣದಲ್ಲಿ ಪದವಿ ಅಥವಾ ಬಿ.ಪಿ.ಎಡ್. ತರಬೇತಿ (ಅಥವಾ ತತ್ಸಮಾನ) ಅಥವಾ ಪದವಿ ಹೊಂದಿದ್ದು, ರಾಜ್ಯ / ವಿಶ್ವವಿದ್ಯಾಲಯವನ್ನು ಕ್ರೀಡೆಗಳಲ್ಲಿ / ಆಟಗಳಲ್ಲಿ / ಅಥ್ಲೇಟಿಕ್ಸ್ ನಲ್ಲಿ ಪ್ರತಿನಿಧಿಸಿರತಕ್ಕದ್ದು. ಅಥವಾ ಪದವಿ ಅರ್ಹತೆ ಇದ್ದು, ಅಂತರ್ ಕಾಲೇಜ್ ಮಟ್ಟದ ಕ್ರೀಡೆಗಳು / ಆಟಗಳ ಪಂದ್ಯಾವಳಿಗಳಲ್ಲಿ 1 ಅಥವಾ 2 ಅಥವಾ 3ನೇ ಸ್ಥಾನವನ್ನು ಪಡೆದಿದ್ದು / ಎನ್.ಸಿ.ಸಿ. "ಸಿ" ಸರ್ಟಿಫಿಕೇಟ್ ಅಥವಾ ಸಾಹಸ ಕ್ರೀಡೆಗಳ ಬೇಸಿಕ್ ಕೋರ್ಸ್ ನಲ್ಲಿ ಉತ್ತೀರ್ಣ ಹೊಂದಿರತಕ್ಕದ್ದು.
		ಅಥವಾ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಫಾರ್ಮ್ಸ್ ಆಫ್ ಅಪ್ಲಿಕೇಶನ್, ಫಾರ್ ರೆಕಗ್ನಿಷನ್, ದಿ ಟೈಮ್ ಲಿಮಿಟ್ ಆಫ್ ಸಬ್ಮಿಷನ್ ಆಫ್ ಅಪ್ಲೀಕೇಶನ್, ಡಿಟರ್ಮಿನೇಷನ್ ಆಫ್ ನಾರ್ಮ್ಸ್ ಅಂಡ್ ಸ್ಟಾಂಡರ್ಡ್ಸ್ ಫಾರ್ ರೆಕಗ್ನಿಷನ್ ಆಫ್ ಟೀಚರ್ ಎಜುಕೇಷನ್ ಪ್ರೋಗ್ರಾಮ್ಸ್ ಅಂಡ್ ಪರ್ಮಿಷನ್ ಟು ಸ್ಟಾರ್ಟ್ ನ್ಯೂ ಕೋರ್ಸ್ ಆರ್ ಟ್ರೈನಿಂಗ್) ನಿಯಮಗಳು, 2002 ದಿನಾಂಕ: 13.11.2002 ರಂತೆ ಪದವಿ ವಿದ್ಯಾರ್ಹತೆ ಇದ್ದು, ಕ್ರೀಡಾ ವಿಜ್ಞಾನ, ಕ್ರೀಡಾ ಆಡಳಿತ, ಕ್ರೀಡಾ ತರಬೇತಿ, ಯೋಗಾ, ಒಲಂಪಿಕ್ ಶಿಕ್ಷಣ, ಕ್ರೀಡಾ ಪತ್ರಿಕೋದ್ಯಮ ಮುಂತಾದ ವಿಷಯಗಳಲ್ಲಿ ಒಂದು ವರ್ಷದ ತರಬೇತಿ ಕಾರ್ಯಕ್ರಮ ಪೂರೈಸಿರತಕ್ಕದ್ದು. ಮತ್ತು (ಬಿ) ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ ನಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕನಿಷ್ಟ ಒಂದು ವರ್ಷದ ಅವಧಿಯ ದೈಹಿಕ ಶಿಕ್ಷಣ ಪದವಿ (ಬಿ.ಪಿ.ಎಡ್.) (ಅಥವಾ ತತ್ಸಮಾನ) ಪರಂತು, ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಸೇರಿದ ಅಭ್ಯರ್ಥಿಯಾಗಿದ್ದಲ್ಲಿ ಅಥವಾ ಅಂಗವೈಕಲ್ಯವುಳ್ಳ ಅಭ್ಯರ್ಥಿಯಾಗಿದ್ದಲ್ಲಿ ಪದವಿಯಲ್ಲಿ ಕನಿಷ್ಟ ಶೇಕಡ ನಲವತ್ತೈದು ಅಂಕಗಳನ್ನು ಪಡೆದಿರತಕ್ಕದ್ದು.

ಅನುಸೂಚಿ- II

(ನಿಯಮ 5(2) ನ್ನು ನೋಡುವುದು)

ಸ್ಪರ್ಧಾತ್ಮಕ ಪರೀಕ್ಷೆಯ ವಿವರಗಳು

(1) ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5 ನೇ ತರಗತಿ)

ಪತ್ರಿಕೆ-I - ಸಾಮಾನ್ಯ ಪತ್ರಿಕೆ

ವಸ್ತುನಿಷ್ಠ ಮಾದರಿಯ ಪರೀಕ್ಷೆ (Objective Type) – 100 ಅಂಕಗಳು (OMR)

ಈ ಪತ್ರಿಕೆಯು ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

- ಸಾಮಾನ್ಯ ಜ್ಞಾನ;
- ಬಾಲ ಮನೋವಿಜ್ಞಾನ;
- ಮಾನಸಿಕ ಸಾಮರ್ಥ್ಯ;

Scanned with CamScanner

Scanned with OKEN Scanner

- ಭಾಷೆಗಳು – ಸಾಮಾನ್ಯ ಕನ್ನಡ ಮತ್ತು ಸಾಮಾನ್ಯ ಇಂಗ್ಲಿಷ್;
- ಮೌಲ್ಯ ಶಿಕ್ಷಣ;
- ಆರೋಗ್ಯ ಶಿಕ್ಷಣ ಮತ್ತು
- ಗಣಕಯಂತ್ರ ಸಾಕ್ಷರತೆ (ಕಂಪ್ಯೂಟರ್ ಜ್ಞಾನ).

ಪತ್ರಿಕೆ-II – ವಿಷಯ ನಿರ್ದಿಷ್ಟ ಪತ್ರಿಕೆ
ವಸ್ತುನಿಷ್ಠ ಮಾದರಿ – 100 ಅಂಕಗಳು

ವಿಷಯ ಜ್ಞಾನ – ಗಣಿತ, ಪರಿಸರ ಅಧ್ಯಯನ (EVS), ಸಮಾಜ ವಿಜ್ಞಾನ – (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(2) ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-II (1 ರಿಂದ 8 ನೇ ತರಗತಿ)

ಪತ್ರಿಕೆ-I - ಸಾಮಾನ್ಯ ಪತ್ರಿಕೆ
ವಸ್ತುನಿಷ್ಠ ಮಾದರಿಯ ಪರೀಕ್ಷೆ (Objective Type) – 100 ಅಂಕಗಳು (OMR)
ಈ ಪತ್ರಿಕೆಯು ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

- ಸಾಮಾನ್ಯ ಜ್ಞಾನ;
- ಬಾಲ ಮನೋವಿಜ್ಞಾನ;
- ಮಾನಸಿಕ ಸಾಮರ್ಥ್ಯ;
- ಭಾಷೆಗಳು - ಸಾಮಾನ್ಯ ಕನ್ನಡ ಮತ್ತು ಸಾಮಾನ್ಯ ಇಂಗ್ಲಿಷ್;
- ಮೌಲ್ಯ ಶಿಕ್ಷಣ;
- ಆರೋಗ್ಯ ಶಿಕ್ಷಣ ಮತ್ತು
- ಗಣಕಯಂತ್ರ ಸಾಕ್ಷರತೆ.

ಪತ್ರಿಕೆ-II - ವಿಷಯ ನಿರ್ದಿಷ್ಟ ಪತ್ರಿಕೆ
ವಸ್ತುನಿಷ್ಠ ಮಾದರಿ - 100 ಅಂಕಗಳು

- ವಿಷಯ ಜ್ಞಾನ - ದೈಹಿಕ ಶಿಕ್ಷಣ - (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(3) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (GPT) (6 ರಿಂದ 8 ನೇ ತರಗತಿ)

ಪತ್ರಿಕೆ-I - ಸಾಮಾನ್ಯ ಪತ್ರಿಕೆ
ವಸ್ತುನಿಷ್ಠ ಮಾದರಿಯ ಪರೀಕ್ಷೆ - 100 ಅಂಕಗಳು (OMR)
ಈ ಪತ್ರಿಕೆಯು ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

- ಸಾಮಾನ್ಯ ಕನ್ನಡ;
- ಸಾಮಾನ್ಯ ಇಂಗ್ಲಿಷ್;
- ಸಾಮಾನ್ಯ ಜ್ಞಾನ;
- ಪ್ರಚಲಿತ ವಿದ್ಯಮಾನಗಳು;
- ಶೈಕ್ಷಣಿಕ ಮನೋವಿಜ್ಞಾನ ಮತ್ತು ಮಾನವ ಅಭಿವೃದ್ಧಿ;
- ಮೌಲ್ಯ ಶಿಕ್ಷಣ ಮತ್ತು ಆರೋಗ್ಯ ಶಿಕ್ಷಣ; ಮತ್ತು
- ಗಣಕಯಂತ್ರ ಸಾಕ್ಷರತೆ.

ಪತ್ರಿಕೆ-II - ವಿಷಯ ನಿರ್ದಿಷ್ಟ ಪತ್ರಿಕೆ

(1)ಜಿಪಿಟಿ (GPT) - ಭಾಷಾ ಶಿಕ್ಷಕರು (ಕನ್ನಡ)

- ವಿಷಯ ಜ್ಞಾನ ಕನ್ನಡ - ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು: 100 ಅಂಕಗಳು (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

Scanned with CamScanner

Scanned with OKEN Scanner

(2) ಜಿಪಿಟಿ (GPT) - ಭಾಷಾ ಶಿಕ್ಷಕರು (ಇಂಗ್ಲಿಷ್)

- ವಿಷಯ ಜ್ಞಾನ ಇಂಗ್ಲಿಷ್ - ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು: 100 ಅಂಕಗಳು (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(3) ಜಿಪಿಟಿ (GPT) - ಗಣಿತ ಮತ್ತು ವಿಜ್ಞಾನ ಶಿಕ್ಷಕರು

- ವಿಷಯ ಜ್ಞಾನ – ಗಣಿತ ಮತ್ತು ಭೌತವಿಜ್ಞಾನ ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು: 100 ಅಂಕಗಳು (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(4) ಜಿಪಿಟಿ (GPT) - ಸಮಾಜ ವಿಜ್ಞಾನ ಶಿಕ್ಷಕರು

- ವಿಷಯ ಜ್ಞಾನ – ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವ್ಯವಹಾರ ಅಧ್ಯಯನ, ಸಮಾಜಶಾಸ್ತ್ರ, ಮತ್ತು ಭೂಗೋಳಶಾಸ್ತ್ರ, ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು: 100 ಅಂಕಗಳು (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(5) ಜಿಪಿಟಿ (GPT) – ಜೀವ ವಿಜ್ಞಾನ ಶಿಕ್ಷಕರು

- ವಿಷಯ ಜ್ಞಾನ - ರಸಾಯನಶಾಸ್ತ್ರ, ಮತ್ತು ಜೀವವಿಜ್ಞಾನ ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು: 100 ಅಂಕಗಳು (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(4) ಗಣಕ ವಿಜ್ಞಾನ (ಕಂಪ್ಯೂಟರ್ ಸೈನ್ಸ್) ಶಿಕ್ಷಕರು (1 ರಿಂದ 8 ನೇ ತರಗತಿ)

ಪತ್ರಿಕೆ-I - ಸಾಮಾನ್ಯ ಪತ್ರಿಕೆ
ವಸ್ತುನಿಷ್ಠ ಮಾದರಿಯ ಪರೀಕ್ಷೆ - 100 ಅಂಕಗಳು (OMR)
ಈ ಪತ್ರಿಕೆಯು ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

- ಸಾಮಾನ್ಯ ಕನ್ನಡ;
- ಸಾಮಾನ್ಯ ಇಂಗ್ಲಿಷ್;
- ಸಾಮಾನ್ಯ ಜ್ಞಾನ;
- ಪ್ರಚಲಿತ ವಿದ್ಯಮಾನಗಳು;
- ಶೈಕ್ಷಣಿಕ ಮನೋವಿಜ್ಞಾನ ಮತ್ತು ಮಾನವ ಅಭಿವೃದ್ಧಿ;
- ಮೌಲ್ಯ ಶಿಕ್ಷಣ ಮತ್ತು ಆರೋಗ್ಯ ಶಿಕ್ಷಣ; ಮತ್ತು
- ಗಣಕಯಂತ್ರ ಸಾಕ್ಷರತೆ.

ಪತ್ರಿಕೆ-II - ವಿಷಯ ನಿರ್ದಿಷ್ಟ ಪತ್ರಿಕೆ
ವಸ್ತುನಿಷ್ಠ ಮಾದರಿ - 100 ಅಂಕಗಳು

- ವಿಷಯ ಜ್ಞಾನ - ಗಣಕಯಂತ್ರ ವಿಜ್ಞಾನ (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(5) ಪ್ರೌಢಶಾಲಾ ಸಹ ಶಿಕ್ಷಕರು (Assistant Master)

ಪತ್ರಿಕೆ-I - ಸಾಮಾನ್ಯ ಪತ್ರಿಕೆ
ವಸ್ತುನಿಷ್ಠ ಮಾದರಿಯ ಪರೀಕ್ಷೆ – 100 ಅಂಕಗಳು (OMR)
ಈ ಪತ್ರಿಕೆಯು ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

- ಸಾಮಾನ್ಯ ಕನ್ನಡ;
- ಸಾಮಾನ್ಯ ಇಂಗ್ಲಿಷ್;
- ಸಾಮಾನ್ಯ ಜ್ಞಾನ / ಪ್ರಚಲಿತ ವಿದ್ಯಮಾನಗಳು;
- ಶೈಕ್ಷಣಿಕ ಮನೋವಿಜ್ಞಾನ;
- ಮಾನಸಿಕ ಸಾಮರ್ಥ್ಯ;
- ಗಣಕಯಂತ್ರ ಸಾಕ್ಷರತೆ ಮತ್ತು
- ಮೌಲ್ಯ ಶಿಕ್ಷಣ / ಆರೋಗ್ಯ ಶಿಕ್ಷಣ.

Scanned with CamScanner

Scanned with OKEN Scanner

ಪತ್ರಿಕೆ-II – ವಿಷಯ ನಿರ್ದಿಷ್ಟ ಪತ್ರಿಕೆ

(1) ಭಾಷಾ ಶಿಕ್ಷಕರು ಕನ್ನಡ (AM)

- ವಿಷಯ ಜ್ಞಾನ – ಕನ್ನಡ - ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು: 100 ಅಂಕಗಳು (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(2) ಭಾಷಾ ಶಿಕ್ಷಕರು ಇಂಗ್ಲಿಷ್ (AM)

- ವಿಷಯ ಜ್ಞಾನ – ಇಂಗ್ಲಿಷ್ - ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು: 100 ಅಂಕಗಳು (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(3) ಸಿಬಿಜೆಡ್ (CBZ) ಶಿಕ್ಷಕರು (AM)

- ವಿಷಯ ಜ್ಞಾನ – ರಸಾಯನಶಾಸ್ತ್ರ, ಮತ್ತು ಜೀವವಿಜ್ಞಾನ - ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು: 100 ಅಂಕಗಳು (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(4) ಕಲಾ (Arts) ಶಿಕ್ಷಕರು (AM)

- ವಿಷಯ ಜ್ಞಾನ – ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವ್ಯವಹಾರ ಅಧ್ಯಯನ, ಸಮಾಜಶಾಸ್ತ್ರ, ಮತ್ತು ಭೂಗೋಳಶಾಸ್ತ್ರ - ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು: 100 ಅಂಕಗಳು (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

(6) ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-I

ಪತ್ರಿಕೆ-I - ಸಾಮಾನ್ಯ ಪತ್ರಿಕೆ

ವಸ್ತುನಿಷ್ಠ ಮಾದರಿಯ ಪರೀಕ್ಷೆ – 100 ಅಂಕಗಳು (OMR)

ಈ ಪತ್ರಿಕೆಯು ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

- ಸಾಮಾನ್ಯ ಕನ್ನಡ;
- ಸಾಮಾನ್ಯ ಇಂಗ್ಲಿಷ್;
- ಸಾಮಾನ್ಯ ಜ್ಞಾನ / ಪ್ರಚಲಿತ ವಿದ್ಯಮಾನಗಳು;
- ಶೈಕ್ಷಣಿಕ ಮನೋವಿಜ್ಞಾನ;
- ಮಾನಸಿಕ ಸಾಮರ್ಥ್ಯ;
- ಗಣಕಯಂತ್ರ ಸಾಕ್ಷರತೆ ಮತ್ತು
- ಮೌಲ್ಯ ಶಿಕ್ಷಣ / ಆರೋಗ್ಯ ಶಿಕ್ಷಣ.

ಪತ್ರಿಕೆ-II – ವಿಷಯ ನಿರ್ದಿಷ್ಟ ಪತ್ರಿಕೆ

ವಸ್ತುನಿಷ್ಠ ಮಾದರಿ – 100 ಅಂಕಗಳು

- ವಿಷಯ ಜ್ಞಾನ – ದೈಹಿಕ ಶಿಕ್ಷಣ - (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ).

ಸೂಚನೆ: ಪರೀಕ್ಷಾ ಪ್ರಾಧಿಕಾರವು ಪರೀಕ್ಷೆಗೆ ಕನಿಷ್ಠ 45 ದಿನಗಳ ಮೊದಲು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಪಠ್ಯಕ್ರಮವನ್ನು (Syllabus) ಪ್ರಕಟಿಸಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಲ್ಲಿಕಾರ್ಜುನ ರಾಮಚಂದ್ರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ),
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

Scanned with CamScanner

Scanned with OKEN Scanner

GOVERNMENT OF KARNATAKA

No.EP 80 DPI 2026

Karnataka Government Secretariat
M.S.Building,
Dr|| B.R. Ambedkar Veedhi,
Bengaluru, Dated:10/08/2026.

NOTIFICATION

Whereas the draft of the Karnataka Education Department Services (Department of Public Instruction) (Recruitment to Certain Teaching Posts) (Special) Rules, 2026, was published as required by clause (a) of sub-section (2) of section 3 read with Section 8 of the Karnataka State Civil Services Act, 1978 (Karnataka Act 14 of 1990) in Part-IVA (No.522) of the Karnataka Gazette Extraordinary dated: 14.07.2026 inviting objections and suggestions from all persons likely to be affected thereby within fifteen days from the date of its publication in the official Gazette.

Whereas the said Gazette was made available to the public on 14.07.2026.

And whereas the objections and suggestions received from the persons likely to be affected thereby have been considered by the Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely;

RULES

1. Title, Commencement and Application, - (1) These rules may be called the Karnataka Education Department Services (Department of Public Instruction) (Recruitment to Certain Teaching Posts) (Special) Rules, 2026.

(2) They shall come into force from the date of their publication in the Official Gazette.

(3) Notwithstanding anything contained in the Karnataka Civil Services (General Recruitment) Rules, 1977 or the Karnataka Education Department Services (Department of Public Instruction) (Recruitment) Rules, 1967 or the Karnataka Civil Services (Classification, Control And Appeal) Rules, 1957 or any other rules of recruitment made or deemed to have been made under the Karnataka State Civil Services Act, 1978 (Karnataka Act 14 of 1990), the provisions of these rules shall apply only for the recruitment thereunder.

(4) Nothing contained in these rules shall apply to more than one recruitment.

Scanned with CamScanner

Scanned with OKEN Scanner

2. Definitions, - (1) In these rules, unless the context otherwise requires, -

(a) "appointing authority" means the Deputy Director of School Education (Administration) in charge of the Education District concerned in respect of the posts in the cadres of Primary School Teacher (Class 1 to 5), Graduate Primary School Teacher (Class 6 to 8), Physical Education Teacher (Grade - II) (Class 1 to 8), Computer Science Teacher (Class 1 to 8), Secondary School Assistant Master and Physical Education Teacher Grade-I;

(b) "examination authority" means the Centralised Admission Cell constituted for the purpose of recruitment under these rules specified in rule 3 ;

(c) **"qualifying examination"** means the minimum qualification specified in column (3) of the Schedule – I for recruitment to each of the posts specified in column (2) thereof;

(d) " selecting authority" means, -

